# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 239 | Pages. 2 | Date: 03-08-2025, SUNDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 239 - ಪುಟಗಳು : 2 03-08-2025 ಭಾನುವಾರ | Ph: 8762954248 | ದರ : ₹1


# ಪ್ರಜ್ವಲ್ ರೇವಣ್ಣಗೆ ಜೀವಾವಧಿ ಶಿಕ್ಷೆ

## ಅತ್ಯಾಚಾರ ಆರೋಪ ಪ್ರಕರಣ : ಸೆಷೆನ್ಸ್ ನ್ಯಾಯಾಲಯ ಮಹತ್ವದ ತೀರ್ಪು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿದ್ದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಜನಪ್ರತಿನಿಧಿಗಳ ವಿಶೇಷ (ಸೆಷನ್ಸ್) ನ್ಯಾಯಾಲಯವು ಜೀವಾವಧಿ ಕಾರಾಗೃಹ ವಾಸದ ಶಿಕ್ಷೆ ಪ್ರಕಟಿಸಿದೆ.

ಲೋಕಸಭೆಗೆ 2024ರ ಏಪ್ರಿಲ್‌ನಿಂದ ಜೂನ್ ಮಧ್ಯಭಾಗದಲ್ಲಿ ವಿವಿಧ ಹಂತಗಳಲ್ಲಿ ನಡೆದ ಚುನಾವಣೆ ವೇಳೆ ಪ್ರಜ್ವಲ್ ರೇವಣ್ಣ ಹಾಸನ ಲೋಕಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಈ ವೇಳೆ ಸಂಸದನಾಗಿದ್ದ ಪ್ರಜ್ವಲ್ ರದ್ದು ಎನ್ನಲಾದ ಲೈಂಗಿಕ ದೌರ್ಜನ್ಯ ಕೃತ್ಯಗಳ ಹಲವು ವಿಡಿಯೊಗಳು ಹಾಗೂ ಅಶ್ಲೀಲ ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ಬಿತ್ತರಗೊಂಡಿದ್ದವು. ಈ ವಿಡಿಯೊಗಳ ಪೈಕಿ 48 ವರ್ಷದ ಸಂತ್ರಸ್ತೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ವಿಡಿಯೊ ಕೂಡಾ ಬಿತ್ತರಗೊಂಡಿತ್ತು.

ಪ್ರಜ್ವಲ್ ಸ್ವಯಂ ಚಿತ್ರೀಕರಿಸಿದ್ದ ಎನ್ನಲಾದ ಹತ್ತಾರು ಅಶ್ಲೀಲ ವಿಡಿಯೊಗಳು ವ್ಯಾಪಕವಾಗಿ ಬಿತ್ತರಗೊಂಡು ಸಾರ್ವಜನಿಕ ವಲಯದಲ್ಲಿ ಸಂಚಲನ ಮೂಡಿಸಿದ ಬೆನ್ನಲ್ಲೇ ಹಾಲಿ ಪ್ರಕರಣದ ಸಂತ್ರಸ್ತೆ, ತಮ್ಮ ಮನೆಯಿಂದ ಕಣ್ಮರೆಯಾಗಿದ್ದರು. ಈ ವೇಳೆ ಸಂತ್ರಸ್ತೆಯ ಪುತ್ರ 2024ರ ಮೇ 2ರಂದು ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ, ಪ್ರಜ್ವಲ್ ತಂದೆಯೂ ಆಗಿರುವ, ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಮತ್ತು ಸಂಬಂಧಿ ಸತೀಶ್ ಬಾಬಣ್ಣ ವಿರುದ್ಧ ನನ್ನ ತಾಯಿಯ ಅಪಹರಣ ಮಾಡಲಾಗಿದೆ ಎಂದು ಆರೋಪಿಸಿ ದೂರು ದಾಖಲಿಸಿದ್ದರು. ಕ್ರಿಮಿನಲ್ ದೂರು ದಾಖಲಿಸಿಕೊಂಡು ಪ್ರಕರಣವನ್ನು ಭೇದಿಸಿದ್ದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಪೊಲೀಸರು ಸಂತ್ರಸ್ತೆಯು ತೋಟದ ಮನೆಯೊಂದರಲ್ಲಿ ಇದ್ದ ಜಾಡನ್ನು ಪತ್ತೆ ಹಚ್ಚಿದ್ದರು. ವಿಚಾರಣೆ ವೇಳೆ ಸಂತ್ರಸ್ತೆಯು, ಪ್ರಜ್ವಲ್ ನನ್ನ ಮೇಲೆ ಬಲವಂತವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಹಾಗೂ ಅತ್ಯಾಚಾರ ಮಾಡಿದ್ದಾರೆ ಎಂದು ಆರೋಪಿಸಿದ್ದರು.

ಈ ಸಂಬಂಧ ಸಿಐಡಿ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಜ್ವಲ್ ವಿರುದ್ಧ, ಭಾರತೀಯ ದಂಡ ಸಂಹಿತೆ1860ರ ಕಲಂ 376(2)(ಕೆ), 376(2) (ಎನ್), 354(ಎ)(ಬಿ)(ಸಿ), 506, 201 ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ2008ರ ಕಲಂ 66(ಇ) ಅಡಿ ಎಫ್‌ಐಆರ್ ದಾಖಲು ಮಾಡಲಾಗಿತ್ತು. ಬಳಿಕ ಸಂತ್ರಸ್ತೆಯನ್ನು ಸಕ್ಷಮ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ 1973ರ (ಸಿಆರ್‌ಪಿಸಿ) ಕಲಂ 164ರ ಅಡಿ ಹೇಳಿಕೆ ದಾಖಲು ಮಾಡಿಸಲಾಗಿತ್ತು.





### ಪ್ರಜ್ವಲ್ ಪ್ರಕರಣ ನಡೆದು ಬಂದ ದಾರಿ

2024 ಏಪ್ರಿಲ್: ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಲೈಂಗಿಕ ವಿಡಿಯೊಗಳಿರುವ ಪೆನ್ ಡ್ರೈವ್ ಹಾಸನದ ತುಂಬೆಲ್ಲಾ ಹರಿದಾಡಿತು.

ಏಪ್ರಿಲ್ 20: ಚುನಾವಣೆ ಸಂದರ್ಭದಲ್ಲೇ ಪ್ರಜ್ವಲ್ ಅವರ ವರ್ಚಸ್ಸಿಗೆ ಧಕ್ಕೆಯನ್ನುಂಟು ಮಾಡಲು ಪೆನ್ ಡ್ರೈವ್ ಹಂಚಲಾಗುತ್ತಿದೆ ಎಂದು ಆರೋಪಿಸಿ ಚುನಾವಣಾ ಏಜೆಂಟ್ ಒಬ್ಬರು ಎಫ್‌ಐಆರ್ ದಾಖಲಿಸಿದ್ದರು.

ಏಪ್ರಿಲ್ 26: ಲೋಕಸಭಾ ಚುನಾವಣೆ ಪೂರ್ಣಗೊಂಡ ಬಳಿಕ, ರಾಜತಾಂತ್ರಿಕ ಪಾಸ್‌ಪೋರ್ಟ್ ಬಳಸಿ ಪ್ರಜ್ವಲ್ ವಿದೇಶ ಪ್ರಯಾಣ.

ಏಪ್ರಿಲ್ 27: ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡವನ್ನು ರಚಿಸಿದ ರಾಜ್ಯ ಸರ್ಕಾರ.

ಏಪ್ರಿಲ್ 30: ಪ್ರಜ್ವಲ್ ರೇವಣ್ಣ ಅವರನ್ನು ಪಕ್ಷದಿಂದ ಅಮಾನತುಗೊಳಿಸಿದ ಜೆಡಿಎಸ್.

ಮೇ 2: ಪ್ರಜ್ವಲ್ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯಿಂದ ಲೈಂಗಿಕ ದೌರ್ಜನ್ಯ ದೂರು ದಾಖಲು. ರೇವಣ್ಣ ಹೆಸರು ಉಲ್ಲೇಖ.

ಮೇ 3: ಅಪಹರಣಕ್ಕೊಳಗಾಗಿದ್ದ ದೂರರಾರರನ್ನು ಮೈಸೂರು ಬಳಿಯ ಫಾರ್ಮ್‌ಹೌಸ್ ಬಳಿ ರಕ್ಷಣೆ.

ಮೇ 4: ಅಪಹರಣ ಪ್ರಕರಣದಲ್ಲಿ ರೇವಣ್ಣ ಬಂಧನ.

ಮೇ 7: ಎಸ್‌ಐಟಿ ಎದುರು ಹಾಜರಾಗುವಂತೆ ಪ್ರಜ್ವಲ್ ವಿರುದ್ಧ ಬ್ಲೂ ಕಾರ್ನರ್ ನೋಟಿಸ್ ಜಾರಿ.

ಮೇ 31: ಭಾರತಕ್ಕೆ ಬಂದ ಪ್ರಜ್ವಲ್, ಮಹಿಳಾ ಅಧಿಕಾರಿಗಳನ್ನೇ ಒಳಗೊಂಡ ಎಸ್‌ಐಟಿ ತಂಡದಿಂದ ಬಂಧನ.

ಸೆ. 8: ಪ್ರಜ್ವಲ್ ವಿರುದ್ಧ ದೋಷಾರೋಪ ಸಲ್ಲಿಸಿದ ಎಸ್‌ಐಟಿ.

2025 ಮೇ 2: ವಿಚಾರಣೆ ಆರಂಭಿಸಿದ ನ್ಯಾಯಾಲಯ.

ಜುಲೈ 18: ವಿಚಾರಣೆ ಪೂರ್ಣ.

ಆಗಸ್ಟ್ 1: ಪ್ರಜ್ವಲ್ ದೋಷಿ ಎಂದು ಸಾಬೀತು.

### ಪ್ರಜ್ವಲ್ ಸ್ಥಿತಿಗೆ ಅಜ್ಜ, ಅಪ್ಪ-ಅಮ್ಮ ಎಷ್ಟು ಕಾರಣ..?

**-ಪ್ರಸಾದ್ ರಕ್ಷಿದಿ**

ಪ್ರಜ್ವಲ್ ರೇವಣ್ಣನಿಗೆ ಶಿಕ್ಷೆ ಪ್ರಕಟವಾಗಿದೆ. ಅತಿ ಹೆಚ್ಚಿನ ಶಿಕ್ಷೆಯನ್ನೇ ನ್ಯಾಯಾಲಯ ನೀಡಿದೆ. ಆ ಪ್ರಕರಣದ ವಿವರಗಳನ್ನು ನೋಡುತ್ತ ಹೋದರೆ, ಈ ಶಿಕ್ಷೆ ಹೆಚ್ಚಾಯಿತೆಂದು ಖಂಡಿತ ಯಾರಿಗೂ ಅನ್ನಿಸದು. ಯಾಕೆಂದರೆ ಅಪರಾಧ ಅಷ್ಟು ಗುರುತರವಾಗಿದೆ.

ಶಿಕ್ಷೆಯ ಪ್ರಮಾಣವನ್ನು ಕಡಿಮೆಮಾಡಿ ಎಂದು ಯಾವ ರೀತಿ ಬೇಡಿಕೊಂಡರೂ ನ್ಯಾಯಾಲಯ ಅದನ್ನು ಪರಿಗಣಿಸಿಲ್ಲ. ಯಾಕೆಂದರೆ ಆಅಪರಾಧದ ಎದುರು ಆ ಬೇಡಿಕೆಗಳೂ ಅಷ್ಟೇ ಅಸಂಬದ್ಧವಾಗಿದ್ದವು.

ಹೌದು ರಾಜಕೀಯ ವಿರೋಧಿಗಳು ಚುನಾವಣಾ ಸಂದರ್ಭದಲ್ಲಿ ಈ ವಿಚಾರವನ್ನು ಬಳಸಿದ್ದಾರೆ. ಆದರೆ ಅದೇನು ಅಪರಾಧದ ಪ್ರಮಾಣವನ್ನು ಕಡಿಮೆ ಮಾಡದು.

ಪ್ರಜ್ವಲ್ ರಾಜಕೀಯಕ್ಕೆ ಬಂದಾಗ ನಿಜವಾಗಿಯೂ ಒಂದು ಹೊಸಸಂಚಲನ ಮೂಡಿತ್ತು. ದೇವೇಗೌಡರ ಮೊಮ್ಮಗ, ಹೊಸತಲೆಮಾರಿನ ಹುಡುಗ, ಒಳ್ಳೆಯ ಇಂಗ್ಲಿಷ್ ಭಾಷಾ ಜ್ಞಾನ ಇರುವಾತ. ದೇವೇಗೌಡರ ನಿಜವಾದ ರಾಜಕೀಯ ಉತ್ತರಾಧಿಕಾರಿ, ಇತ್ಯಾದಿ ಭಾವನೆಗಳು ಜನರಲ್ಲಿ ಮತ್ತು ಜೆಡಿಎಸ್ ಕಾರ್ಯಕರ್ತರಲ್ಲಿ ಇತ್ತು.

ರಾಜ್ಯಕ್ಕೆ ಕುಮಾರಣ್ಣ ಇದ್ದರೆ ದೆಹಲಿ ಪ್ರಜ್ವಲ್ ಎಂಬ ಭಾವನೆ ಇತ್ತು. ದೇವೇಗೌಡರ ರಾಜಕಾರಣದ ಬಗ್ಗೆ ಸಹಜವಾಗಿಯೇ ದೇಶದೆಲ್ಲೆಡೆ ತಕರಾರುಗಳಿವೆ. ವಿರೋಧ ಇದ್ದೇ ಇದೆ. ಆದರೆ ಅಷ್ಟೇ ಪ್ರಮಾಣದಲ್ಲಿ ಅವರ ಆಡಳಿತವನ್ನು ಮೆಚ್ಚಿಕೊಳ್ಳುವವರೂ ಇದ್ದಾರೆ. ರಾಜಕಾರಣ ಎಂದರೆ ಹಾಗೇಯೇ ಅಲ್ಲವೇ?

ಪ್ರಜ್ವಲ್‌ನ ಸಂಸತ್ತಿನ ಪ್ರವೇಶ ಉತ್ತಮ ರೀತಿಯಲ್ಲಿಯೇ ಆಯಿತು. ತೇಜಸ್ವಿ ಸೂರ್ಯನನ್ನು ಸಂಸತ್ತಿನಲ್ಲು ಬಾಯಿ ಮುಚ್ಚಿಸಿದ ರೀತಿ, ಮುಂದೆ ಕರ್ನಾಟಕಕ್ಕೆ ಒಬ್ಬ ಒಳ್ಳೆಯ ಸಂಸದ ದೊರೆಯುವ ಭರವಸೆ ಮೂಡಿತು. ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿ ವಿಚಾರ ತಿಳಿದುಕೊಳ್ಳುತ್ತಿದ್ದ ಬಗ್ಗೆ ಹಲವರ ಮೆಚ್ಚುಗೆಗೆ ಕಾರಣವಾಗಿತ್ತು.

ನಾನು ಪ್ರಜ್ವಲ್‌ನನ್ನು ಭೇಟಿಯಾದದ್ದು ಕೇವಲ ಮೂರು ಬಾರಿ ಮಾತ್ರ. ಕಾಫಿ ಬೆಳೆಗಾರರ ಸಮಸ್ಯೆಗೆ ಆತ ಸ್ಪಂದಿಸಿ ವಿಚಾರ ತಿಳಿದು ಸಂಸತ್ತಿನಲ್ಲಿ ಅದನ್ನು ಪ್ರಸ್ತಾಪಿಸಿದ ಬಗ್ಗೆ ನಾನು ಬರೆದಿದ್ದೆ. (ನಂತರ ಆ ವಿಚಾರಕ್ಕೆ ಸಾಕಷ್ಟು ಆದೆ)

ಆ ನಂತರ ನನ್ನ ಅನೇಕ ಕಿರಿಯ ಗೆಳೆಯರು ಸರ್ ನೀವು ಅಂದುಕೊಂಡದ್ದಕ್ಕಿಂತ ತೀರ ವಿಭಿನ್ನವಾದ ಮುಖ ಆತನಿಗೆ ಇದೆ ಎಂದು ಎಚ್ಚರಿಸಿದರು. ನಂತರ ಯಾವ ಕಾರಣಕ್ಕೂ ಆತನನ್ನು ಬೆಂಬಲಿಸುವ ಕೆಲಸ ಮಾಡಲಿಲ್ಲ.

ಇದೀಗ ಪ್ರಜ್ವಲ್ ಗೆ ಶಿಕ್ಷೆಯಾಗಿದೆ. ಮುಂದಿನ ಹಂತದ ನ್ಯಾಯಾಲಯಗಳಿವೆ ಅದು ಏನಾದರೂ ಆಗಲಿ. ಅಲ್ಲಿ ಶಿಕ್ಷೆ ಬದಲಾಗುವ ಸಂಭವ ಕಡಿಮೆ ಎಂದು ನನ್ನ ಅನಿಸಿಕೆ. ಜೊತೆಗೆ ಇನ್ನೂ ಹಲವು ಪ್ರಕರಣಗಳಿವೆ.

ಆದರೆ ನಾನು ಹೇಳಬೇಕಿರುವುದು. ಪ್ರಜ್ವಲ್‌ಗೆ ಆಗಿರುವ ಶಿಕ್ಷೆಯಲ್ಲಿ ಅವರ ಮನೆಯವರ, ಕುಟುಂಬದವರ ಪಾಲು ಎಷ್ಟು..? ಎಂದು..

ಮುಖ್ಯ ಮೊದಲ ಪಾಲುದಾರರು ತಂದೆತಾಯಿಗಳು, ಮಗನ ವರ್ತನೆ ಹೇಗಿದೆಯೆಂದು ಗಮನಿಸಿ ಸರಿದಾರಿಗೆ ತರುವುದೋ, ತಿದ್ದುವುದೋ, ಅಗತ್ಯ ಬಿದ್ದರೆ ಚಿಕಿತ್ಸೆ ಕೊಡಿಸುವುದೋ ಮಾಡಬೇಕಿತ್ತು. ಪ್ರಜ್ವಲ್‌ನ ವರ್ತನೆಯನ್ನು ಗಮನಿಸಿದರೆ ಸಾಡಿಸ್ಟ್ ವರ್ತನೆ ಕಂಡುಬರುತ್ತದೆ. ಹಾಗಿದ್ದರೆ ಅದಕ್ಕೆ ಪ್ರಾಯಕ್ಕೆ ಬರುವ ಹೊತ್ತಿನಲ್ಲೇ ಚಿಕಿತ್ಸೆ ಅಗತ್ಯ ಇತ್ತು.

ಆದರೆ ಪಾಳೇಗಾರೀ ಪ್ರವೃತ್ತಿಯ ತಂದೆ ತಾಯಿಯರಿಗೆ ಮಗನ ವರ್ತನೆಗಳು ತಪ್ಪೆಂದು ಕಾಣುವ ಸಾಧ್ಯತೆ ಯೇ ಇರಲಿಲ್ಲ. ಇನ್ನು ಕುಟುಂಬದ ಉಳಿದವರು, ಮುಖ್ಯ ಅಜ್ಜ ಇದನ್ನು ಗಮನಿಸಬೇಕಿತ್ತು. ಆದರೆ ನಾವಿರುವುದೇ ದೇಶ ಆಳಲು ಮತ್ತು ನಾವಿರುವುದೇ ಹೀಗೆ ಎಂದು ತೀರ್ಮಾನಕ್ಕೆ ಬಂದವರಲ್ಲಿ ಇದನ್ನೆಲ್ಲ ನಿರೀಕ್ಷಿಸಲಾಗದು. ಅದರ ಫಲ ಇಂದಿನ ಸ್ಥಿತಿ.

ಬಹುಶಃ ದೇವೇಗೌಡರು ಬಿಜೆಪಿ ಜೊತೆ ಸ್ನೇಹ ಮಾಡಿ ಇದನ್ನು ನಿಭಾಯಿಸಿಕೊಳ್ಳುತ್ತೇನೆ ಎಂದು ಕೊಂಡಿದ್ದರೋ ಏನೋ..

( ಬೇಡವೆಂದರೂ ಎಸ್.ಕೃಷ್ಣ ನೆನಪಿಗೆ ಬರುತ್ತಾರೆ) ಅದೇನು ಪ್ರಯೋಜನಕ್ಕೆ ಬಂದಂತಿಲ್ಲ. ಮತ್ತು ಅದಕ್ಕೆ ಹಲವು ಆಯಾಮಗಳಿವೆ. ಇಂದಿನ ಈ ತೀರ್ಪು ಸದ್ಯಕ್ಕೆ ದೇಶದಲ್ಲಿ ಸಂಚಲನ ಮೂಡಿದೆ. ಪ್ರಜ್ವಲ್ ಜೈಲು ಸೇರಬಹುದು. ಆದರೆ ಪ್ರಜ್ಞಲ್ನಷ್ಟೇಅಥವಾ ಅದಕ್ಕಿಂತಲೂ ಹೆಚ್ಚು ಅಪರಾಧಿಗಳು ದೇಶದ ತುಂಬ ಓಡಾಡಿಕೊಂಡಿದ್ದಾರೆ. ಅಂತಹ ಕೆಲವರ ವಿರುದ್ಧ ಹೋರಾಡಲು ಕೆಲವರಿಗಾದರೂ ಒಂದಷ್ಟು ಧೈರ್ಯ ಈ ಪ್ರಕರಣದಿಂದಾಗಿ ಬರಬಹುದು....

ಕೊನೆಗೂ ಹೇಳುವುದಿಷ್ಟೇ ಈ ಪ್ರಕರಣ ನಮ್ಮ ನಡುವಿನ ನೂರಾರು ತಂದೆ ತಾಯಿಯರಿಗೂ ಪಾಠ... ಮತ್ತು ಎಚ್ಚರಿಕೆಯ ಸಂದೇಶವಾಗಲಿ.

### 2 ವಾರದಲ್ಲಿ ಪೆನ್‌ಡ್ರೈವ್ ಹಂಚಿಕೆ ಚಾರ್ಜ್‌ಶೀಟ್

ಅತ್ಯಾಚಾರ ಕೇಸಲ್ಲಿ ಅಪರಾಧಿ ಪ್ರಜ್ವಲ್ ರೇವಣ್ಣಗೆ ಶಿಕ್ಷೆ ಪ್ರಮಾಣ ಪ್ರಕಟವಾದ ಹಿನ್ನೆಲೆ ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ಹಾಸನದಲ್ಲಿ ಪೆನ್ ಡ್ರೈವ್ ವಿತರಣೆ ಮಾಡಿದರು. ತನಿಖೆಗೆ ಸರ್ಕಾರ ಎಸ್‌ಐಟಿ ರಚಿಸಿತು. ಎಸ್‌ಐಟಿ ತಂಡದಲ್ಲಿ ಸೀಮಾ ಮತ್ತು ಸುಮನಾ ಡಿ.ಪನ್ನೇಕರ್ ಇದ್ದರು. ನಾಲ್ಕು ಜನ ಸಂತ್ರಸ್ತೆಯರು ದೂರು ಕೊಟ್ಟಿದ್ದರು. ಒಂದು ಹೊಳೇನರಸೀಪುರ ಪ್ರಕರಣ. ಈ ಪೈಕಿ 5 ಕೇಸ್‌ಗಳ ತನಿಖೆ ಮುಗಿದಿದೆ. ಐದು ಕೇಸ್‌ನಲ್ಲಿ ಒಂದು ಪ್ರಕರಣ ಜನವರಿಯಿಂದ ಟ್ರಯಲ್ ಆರಂಭವಾಗಿತ್ತು. ಮೂರು ತಿಂಗಳಲ್ಲಿ 26 ವಿಟ್ನೆಸ್ ಹಾಗೂ ದಾಖಲೆಗಳನ್ನ ಹಾಜರುಪಡಿಸಲಾಯ್ತು. ಆರೋಪಿ ಪ್ರಜ್ವಲ್ ರೇವಣ್ಣ ಮೇಲೆ ತೀರ್ಪು ಪ್ರಕಟವಾಗಿದೆ. ದೋಷಿ ಎಂದು ಕೋರ್ಟ್ ಹೇಳಿದೆ. ಮುಂದಿನ ಎರಡು ವಾರದಲ್ಲಿ ಪೆನ್‌ಡ್ರೈವ್ ಹಂಚಿಕೆ ಮಾಡಿದ ಪ್ರಕರಣದ ಚಾರ್ಜ್ಶೀಟ್ ಸಲ್ಲಿಕೆ ಮಾಡಲಾಗುತ್ತೆ. ಅದರಲ್ಲಿ ಯಾರೆಲ್ಲ ಆರೋಪಿಗಳಿದ್ದಾರೆ ಎನ್ನುವುದು ತಿಳಿಯುತ್ತದೆ ಎಂದರು.

### ಕಾನೂನು ತಜ್ಞರು ಏನು ಹೇಳುತ್ತಾರೆ..?

ಪ್ರಜ್ವಲ್ ರೇವಣ್ಣ ಮುಂದೆ ಇರುವ ಕಾನೂನು ಆಯ್ಕೆಯ ಕುರಿತಾಗಿ ಕಾನೂನು ತಜ್ಞರು ಹೇಳಿದ್ದಿಷ್ಟು, ಸುಪ್ರೀಂ ಕೋರ್ಟ್ ವ್ಯಾಖ್ಯಾನದ ಪ್ರಕಾರ ಜೀವ ಇರುವ ವರೆಗೆ ಶಿಕ್ಷೆ ಎಂದಾಗಿದೆ. ಕನಿಷ್ಠ 14 ವರ್ಷ ಆದ ಬಳಿಕ ಆರೋಪಿಯ ನಡವಳಿಕೆ ಆಧಾರದಲ್ಲಿ ಜೈಲಿನಿಂದ ಬಿಡುಗಡೆಗೊಳಿಸಲು ಅವಕಾಶ ಇದೆ. ಜನಪ್ರತಿನಿಧಿಗಳ ನ್ಯಾಯಾಲಯ ಕೊಟ್ಟ ಜೀವಾವಧಿ ಶಿಕ್ಷೆ ಅಂತಿಮಲ್ಲ. ಇದನ್ನು ಉಚ್ಚ ನ್ಯಾಯಾಲಯದದಲ್ಲಿ ಪ್ರಶ್ನಿಸಲು ಅವಕಾಶ ಇದೆ. ಹೈಕೋರ್ಟ್‌ನಲ್ಲೂ ಹಿನ್ನೆಡೆಯಾದರೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಕಾನೂನಿನಲ್ಲಿ ಅವಕಾಶ ಇದೆ. ದೂರುದಾರರು ಹಾಗೂ ಆರೋಪಿಗಳಿಗೆ ಇಬ್ಬರಿಗೂ ಈ ಅವಕಾಶ ಕಾನೂನಿನಲ್ಲಿದೆಟ ಎನ್ನುತ್ತಾರೆ. ಅಧೀನ ನ್ಯಾಯಾಲಯದಲ್ಲಿ ನೀಡಿರುವ ತೀರ್ಪು ಕಾನೂನು ಪ್ರಕಾಶವಾಗಿ ಇದೆಯಾ ಇಲ್ಲವೇ ಎಂಬುದು ಮುಖ್ಯವಾಗಿದೆ. ಕೃತ್ಯ ಆದ ಕೂಡಲೇ ಸಂತ್ರಸ್ತರು ದೂರನ್ನು ಸಲ್ಲಿಸಿದ್ದಾರಾ? ಇಲ್ಲವೇ ಎಂಬುವುದು ಮುಖ್ಯವಾಗುತ್ತದೆ. ಅನೇಕ ಸಂದರ್ಭದಲ್ಲಿ ಜೀವಾವಧಿ ಶಿಕ್ಷೆ ಆದವರ ಶಿಕ್ಷೆ ರದ್ದುಗೊಂಡ ಉದಾಹರಣೆಗಳು ಇವೆ. ತರಾತುರಿಯಲ್ಲಿ ವಿಚಾರಣೆ ಪೂರ್ಣಗೊಳಿಸಿದ್ದು, ಕಾಲಾವಧಿಯಲ್ಲಿ ದೂರು ಕೊಡದೆ ಇರುವಂತದ್ದು, ಪೂರಕ ಸಾಕ್ಷ್ಯಗಳನ್ನು ಒದಗಿಸಿದೆ ಇರುವುದು ಹಾಗೂ ಸಾಕ್ಷ್ಯ ಹಾಗೂ ಹೇಳಿಕೆಯ ನಡುವಿನ ವ್ಯತ್ಯಾಸ ಗಮನಿಸದೆ ಇದ್ದ ಅಂಶಗಳನ್ನು ಮುಂದಿಟ್ಟುಕೊಂಡು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲು ಅವಕಾಶ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

### ಪ್ರಜ್ವಲ್ ಮುಂದಿರುವ ಕಾನೂನಾತ್ಮಕ ಅವಕಾಶಗಳೇನು?

ಮನೆ ಕೆಲಸದಾಕೆಯ ಮೇಲೆ ಎಸಗಿದ ಅತ್ಯಾಚಾರ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣಗೆ ಜೀವನ ಪರ್ಯಂತ ಶಿಕ್ಷೆ ವಿಧಿಸಲಾಗಿದೆ.

ಸುದೀರ್ಘ ವಿಚಾರಣೆಯ ಬಳಿಕ ಇಂತಹದೊಂದು ಮಹತ್ವದ ತೀರ್ಪು ನೀಡಿದೆ. ಈ ತೀರ್ಪನ್ನು ಪ್ರಶ್ನಿಸಿ ಪಜ್ವಲ್ ರೇವಣ್ಣ ಅವರಿಗೆ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಅವಕಾಶವಿದೆ.

ಶಿಕ್ಷೆಯನ್ನು ತಾತ್ಕಾಲಿಕವಾಗಿ ಅಮಾನತ್ತಿನಲ್ಲಿಡಲು ಹೈಕೋರ್ಟ್‌ನಲ್ಲಿ ಅಪೀಲು ಹೋಗಲು ಅವಕಾಶ ಇದೆ. ಒಂದು ವೇಳೆ ಪ್ರಜ್ವಲ್ ರೇವಣ್ಣ ಅವರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದರೆ ದ್ವಿಸದಸ್ಯ ಪೀಠದಲ್ಲಿ ವಿಚಾರಣೆಗೆ ಬರಬಹುದು. ಈ ಪ್ರಕರಣದಲ್ಲಿ ನ್ಯಾಯಾಲಯ ವಿಧಿಸಿರುವ ಶಿಕ್ಷೆಯ ಪ್ರಮಾಣ ಅಧಿಕವಾಗಿದೆ. ಅಥವಾ ತಪ್ಪು ವ್ಯಾಖ್ಯಾನದಿಂದ ಆಧಾರಿತವಾಗಿದೆ. ಹೀಗಾಗಿ ಶಿಕ್ಷೆಯನ್ನು ತಡೆ ಹಿಡಿಯುವಂತೆ ಮೇಲ್ಮನವಿ ಸಲ್ಲಿಸಬಹುದು. ಅಷ್ಟೇ ಅಲ್ಲದೆ, ವಿಚಾರಣಾ ನ್ಯಾಯಾಲಯ ಸಾಕ್ಷ್ಯಗಳನ್ನು ಸೂಕ್ತ ರೀತಿಯಲ್ಲಿ ಪರಿಗಣಿಸಿಲ್ಲ. ಕಾನೂನು ಪ್ರಕ್ರಿಯೆಯಲ್ಲಿ ತಪ್ಪಾಗಿದೆ ಎಂದು ವಾದಿಸಲು ಅವಕಾಶ ಇದೆ.

ಇಂತಹ ಸಂದರ್ಭದಲ್ಲಿ ಹೈಕೋರ್ಟ್ ಕೆಲ ಹಂತದ ನ್ಯಾಯಾಲಯ ನೀಡಿರುವ ತೀರ್ಪನ್ನು ಎತ್ತಿಹಿಡಿಯಬಹುದು ಅಥವಾ ರದ್ದುಗೊಳಿಸಬಹುದು. ಇಲ್ಲದೆ ವಿಚಾರಣೆಗೆ ಕೈಗೆತ್ತಿಗೊಳ್ಳಬಹುದು. ಹೈಕೋರ್ಟ್ ನಲ್ಲಿ ಈ ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಂಡು ಅಲ್ಲೂ ಮುಂದೂಡಿದಲ್ಲಿ ಸುಪ್ರೀಂ ಕೋರ್ಟ್ ಗೆ ಮೇಲ್ಮನವಿ ಸಲ್ಲಿಸಲು ಅವಕಾಶ ಇದೆ.

### ತೀರ್ಪು ವಿಳಂಬಕ್ಕೆ ಶತಪ್ರಯತ್ನ: ಎಸ್‌ಐಟಿ ಮುಖ್ಯಸ್ಥ ಬಿ.ಕೆ. ಸಿಂಗ್


ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣದಲ್ಲಿ ತೀರ್ಪು ವಿಳಂಬ ಮಾಡುವುದಕ್ಕೆ ಶತಪ್ರಯತ್ನ ನಡೆದಿತ್ತು ಎಂದು ಎಸ್‌ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್ ತಿಳಿಸಿದರು. ತೀರ್ಪು ವಿಳಂಬ ಮಾಡುವುದಕ್ಕೆ ಶತಪ್ರಯತ್ನ ಮಾಡಿದರು. ಆದರೂ ಆದೇಶ ತಡ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಸಂತ್ರಸ್ತೆ ಸಮಾಜದ ಕೆಳಸಮುದಾಯದ ಮಹಿಳೆಯಾಗಿದ್ದಾರೆ. ತೀರ್ಪು ವಿಳಂಬ ಮಾಡುವುದಕ್ಕೆ ಆರೋಪಿ ಪರ ವಕೀಲರು ಸೇರಿ ಹಲವರು ಪ್ರಯತ್ನಪಟ್ಟಿದ್ದರು ಎಂದು ಎದುರಾದ ಸವಾಲುಗಳ ಬಗ್ಗೆ ಸಿಂಗ್ ಮಾಹಿತಿ ಹಂಚಿಕೊಂಡರು. ಘಟನೆ ಆದ ನಾಲ್ಕು ವರ್ಷದ ಬಳಿಕ ನಮಗೆ ಕೇಸ್ ಕೊಡಲಾಗಿತ್ತು. ಸಾಕ್ಷಿಗಳನ್ನ ನೀಡಿ, ಸರಿಯಾಗಿ ಕೆಲಸ ಮಾಡಿದ್ದಕ್ಕೆ ಶಿಕ್ಷೆ ಕೊಡಿಸಲು ಸಾಧ್ಯವಾಯಿತು. ಅಪರಾಧಿಗೆ ಹೈಕೋರ್ಟ್, ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುವ ಅವಕಾಶ ಇದೆ ಎಂದರು.

# ಪತ್ರಿಕಾ ರಂಗ ವ್ಯಾಪಾರದ ಸರಕಾಗಬಾರದು: ಕೆಎಂಶಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾಧ್ಯಮ ವ್ಯಾಪಾರದ ಸರಕಾಗದೆ ಪ್ರಜಾಪ್ರಭುತ್ವ ಬಲಿಷ್ಠಗೊಳಿಸುವ ಅಸ್ತ್ರವಾಗಬೇಕು. ಡಿಜಿಟಲ್ ಮಾಧ್ಯಮ ಎಂದಿಗೂ ವಿಶ್ವಾಸಕ್ಕೆ ಅರ್ಹವಲ್ಲ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

ನಗರದ ಪವನಪುತ್ರ ರೆಸಾರ್ಟ್‌ನಲ್ಲಿ ಶನಿವಾರ ನಡೆದ ಮಾಧ್ಯಮ ದಿನಾಚರಣೆಯಲ್ಲಿ ಮಾತನಾಡಿ, ಆಧುನಿಕ ತಂತ್ರಜ್ಞಾನ ಯುಗದಲ್ಲಿ ಮಾಧ್ಯಮ ರಂಗವೂ ಡಿಜಿಟಲ್‌ಗೆ ವಾಲುತ್ತಿದೆಯಾದರೂ ಮುದ್ರಣ ಮಾಧ್ಯಮದ ವಿಶ್ವಾಸಾರ್ಹತೆ ಎಂದಿಗೂ ಕಡಿಮೆಯಾಗುವುದಿಲ್ಲ. ಡಿಜಿಟಲ್ ಮಾಧ್ಯಮ ತಾತ್ಕಾಲಿಕವಾಗಿದ್ದು, ಮುದ್ರಣ ಮಾಧ್ಯಮವೇ ಭವಿಷ್ಯದಲ್ಲಿ ಉಳಿಯಲಿದೆ ಎಂದು ಅಭಿಪ್ರಾಯಪಟ್ಟರು.



ಡಿಜಿಟಲ್ ಮಾಧ್ಯಮವು ಜನರನ್ನು ಖುಷಿಪಡಿಸುವ ಜೊತೆಗೆ ಸಮಸ್ಯೆಗಳನ್ನೂ ಸೃಷ್ಟಿಸುತ್ತಿದೆ. ಅತಿಯಾದ ಹೊಗಳಿಕೆ ಅಥವಾ ಟೀಕೆ ಸರಿಯಲ್ಲ, ಅದರಿಂದ ಸಮಸ್ಯೆಗಳೇ ಹೆಚ್ಚಾಗುತ್ತವೆ. ತಾವು ಈಗಲೂ ಮುದ್ರಣ ಮಾಧ್ಯಮವನ್ನು ಮಾತ್ರ ನಂಬುವುದಾಗಿ ಹೇಳಿದರು.

ನಕಲಿ ಸುದ್ದಿಗಳನ್ನು ನಿಲ್ಲಿಸದಿದ್ದರೆ ಅನೇಕ ಜನರು ಹೃದಯಾಘಾತದಿಂದ ಸಾಯುತ್ತಾರೆ. ಅದಕ್ಕೇ ನಾನು ಕೀಪ್ಯಾಡ್ ಮೊಬೈಲ್ ಇಟ್ಟುಕೊಂಡಿದ್ದೇನೆ. ಮಾಧ್ಯಮವು ವ್ಯಾಪಾರೀಕರಣಗೊಳ್ಳಬಾರದು, ಸನಾತನ ಕಾಲದಿಂದ ಉಳಿದಿರುವ ಬದ್ಧತೆಯೇ ಮುಂದುವರಿಯಲಿ. ಮಾಧ್ಯಮಗಳು ಜಗತ್ತಿನ ಪ್ರಗತಿಗೆ ಮುಖ್ಯವಾಗಿದ್ದು, ಕೇಂದ್ರ ಸರ್ಕಾರವು ಜಿಎಸ್‌ಟಿ ಕುರಿತು ತೋರುತ್ತಿರುವ ಮಲತಾಯಿ ಧೋರಣೆಯ ಬಗ್ಗೆ ಬೆಳಕು ಚೆಲ್ಲುವಂತೆ ಮಾಧ್ಯಮಗಳಿಗೆ ಮನವಿ ಮಾಡಿದರು.

ಪತ್ರಕರ್ತರಿಗೆ ನಿವೇಶನ ನೀಡಲು ಕಾನೂನುಗಳನ್ನು ಸಡಿಲಗೊಳಿಸಬೇಕು. ಪ್ರಸ್ತುತ ಗೃಹ ಮಂಡಳಿಯಲ್ಲಿ ಸುಮಾರು 6,500 ನಿವೇಶನಗಳು ಲಭ್ಯವಿದ್ದು, ಅವುಗಳನ್ನು ಹಂಚಿಕೆ ಮಾಡುವ ಅಧಿಕಾರ ಸಚಿವ ಸಂಪುಟಕ್ಕೆ ಮಾತ್ರ ಇದೆ. ಈ ಕಾನೂನನ್ನು ಸಡಿಲಿಸಿ ಪತ್ರಕರ್ತರಿಗೆ ನಿವೇಶನ ನೀಡುವಂತೆ ಶಾಸಕರು ಸರ್ಕಾರವನ್ನು ಒತ್ತಾಯಿಸಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸುದ್ದಿಗಳ ಬದಲಾಗಿ ಅಭಿಪ್ರಾಯಗಳನ್ನು ಹೇರುವ ಪ್ರವೃತ್ತಿ ಹೆಚ್ಚಾಗಿದೆ. ಮೊಬೈಲ್ ಹೊಂದಿರುವವರೆಲ್ಲರೂ ಪತ್ರಕರ್ತರಾಗಿದ್ದು, ಸುದ್ದಿ ನಿಜವೋ ಸುಳ್ಳೋ ಅಥವಾ ಅದರ ಹಿಂದಿನ ಉದ್ದೇಶವೇನಿದೆ ಎಂಬುದನ್ನು ಪರಿಶೀಲಿಸುವ ಸಂಯಮ ತೋರುತ್ತಿಲ್ಲ. ಇದು ಉತ್ತಮ ಪತ್ರಿಕೋದ್ಯಮಕ್ಕೆ ದೊಡ್ಡ ಬೆದರಿಕೆಯಾಗಿದ್ದು, ಆತಂಕಕಾರಿ ಬೆಳವಣಿಗೆ ಎಂದು ಎಚ್ಚರಿಸಿದರು. ಮಾಧ್ಯಮವು ಸಮಾಜವನ್ನು ರೂಪಿಸುವ ಶಕ್ತಿ ಹೊಂದಿದೆ. ಸ್ವಾತಂತ್ರ್ಯ ಹೋರಾಟವೇ ಅದಕ್ಕೆ ಉದಾಹರಣೆ. ಸಮಾಜದಲ್ಲಿ ಪತ್ರಕರ್ತರ ಮೇಲೆ ಹೆಚ್ಚಿನ ನಂಬಿಕೆ ಇದೆ. ಆದರೆ ಅವರ ಸುರಕ್ಷತೆಯನ್ನು ಒದಗಿಸುವಲ್ಲಿ ಸಮಾಜ ವಿಫಲವಾಗಿದೆ. ಆದ್ದರಿಂದ ಪತ್ರಕರ್ತರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಅತ್ಯಂತ ಮುಖ್ಯ. ನಿಖರವಾದ ಸುದ್ದಿಗೆ ಹೇಗೆ ಬೇಡಿಕೆಯಿದೆಯೋ, ಅದೇ ರೀತಿ ನಿಖರವಾದ ಪತ್ರಕರ್ತರ ಅವಶ್ಯಕತೆ ಜಗತ್ತಿಗಿದೆ. ಅದು ಯಾವುದೇ ಮಾಧ್ಯಮವಾಗಲಿ ಎಂದರು.



ಕನ್ನಡ ಪ್ರಭ ಪತ್ರಿಕೆ ಪ್ರಧಾನ ಸಂಪಾದಕ ರವಿ ಹೆಗಡೆ ಮಾತನಾಡಿ, ಇಂದಿನ ಡಿಜಿಟಲ್ ಕ್ರಾಂತಿ ಪತ್ರಿಕೋದ್ಯಮಕ್ಕೆ ಸವಾಲೊಡ್ಡಿದ್ದು, ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವವರು ಮಾತ್ರ ಬದುಕುಳಿಯುತ್ತಾರೆ ಎಂದರು.

ಸಂಸದ ಶ್ರೇಯಸ ಪಟೇಲ್, ಶಾಸಕರಾದ ಸಿ.ಎನ್ ಬಾಲಕೃಷ್ಣ, ಶಾಸಕ ಸಿಮೆಂಟ್ ಮಂಜು, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ್ ತಗಡೂರು, ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ರವಿ ನಾಕಲಗೂಡು,ಬಾಳ್ಳುಗೋಪಾಲ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ ಕೃಷ್ಣೇಗೌಡ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಹೆಚ್.ಬಿ. ಮದನ್ ಗೌಡ , ಐಎಫ್‌ಡಬ್ಲ್ಯೂಜೆ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್. ಕೆ. ವೇಣುಕುಮಾರ್, ಮತ್ತಿತರರಿದ್ದರು.

# ಶಿಕ್ಷಣದಿಂದ ದೊರೆತ ಜ್ಞಾನ ಶಾಶ್ವತ: ಶಂಭುನಾಥ ಶ್ರೀ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಶಿಕ್ಷಣದಿಂದ ದೊರೆತ ಜ್ಞಾನ ಶಾಶ್ವತವಾಗಿ ನಮ್ಮನ್ನು ಸರಿ ದಾರಿಯಲ್ಲಿ ನಡೆಸುತ್ತದೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ನಗರದ ಎಂ.ಜಿ ರಸ್ತೆಯ ಶ್ರೀ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಬಿಜಿಎಸ್ ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜಿನ ವತಿಯಿಂದ ಆಯೋಜಿಸಲಾಗಿದ್ದ ಬಿಜಿಎಸ್-ಸ್ವಾಗತೋತ್ಸವ-2025 ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಆಶೀರ್ವಚನ ನೀಡಿದರು.

ತಂದೆ-ತಾಯಿಗಳ ಶ್ರಮವರಿತು ವಿದ್ಯಾಭ್ಯಾಸದಲ್ಲಿ ತೊಡಗಿಕೊಳ್ಳುವ ಗುಣ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಜವಾಬ್ದಾರಿ ಅರಿಯದೆ ನಡೆದುಕೊಂಡರೆ ಮುಂದಿನ ಜೀವನ ದುಸ್ತರವಾಗಲಿದೆ. ಸಂಸ್ಕಾರ ಇಲ್ಲದ ಬದುಕು ನಮ್ಮನ್ನು ಸನ್ಮಾರ್ಗದತ್ತ ಕೊಂಡೊಯ್ಯಲಾರದು. ಹಾಗಾಗಿ ಪ್ರತಿಯೊಬ್ಬರ ಬದುಕಿನಲ್ಲಿ ಸಂಸ್ಕಾರ ಅಗತ್ಯ ಎಂದರು.

ಜಿಲ್ಲಾಧಿಕಾರಿ ಕೆ.ಎಸ್ ಲತಾಕುಮಾರಿ ಮಾತನಾಡಿ, ನಮ್ಮ ದೇಶದಲ್ಲಿ ಗುರು ಪರಂಪರೆಗೆ ಹೆಚ್ಚಿನ ಪ್ರಾತಿನಿಧ್ಯ ಇದೆ. ಗುರು ನಮಗೆ ಶಿಕ್ಷಣ ಕಲಿಸುವುದರೊಂದಿಗೆ ನಿಜವಾದ ದಾರಿ ದೀಪವಾಗಿ ನಿಲ್ಲುತ್ತಾರೆ ಹಾಗಾಗೀ ಗುರುವನ್ನು ದೈವಿ ಭಾವನೆಯಿಂದ ನೋಡುವ ಗುಣ ನಮ್ಮೆಲ್ಲರಲ್ಲೂ ಬೆಳೆಯಬೇಕು ಎಂದರು.

ವಿದ್ಯಾರ್ಥಿ ಜೀವನದಲ್ಲಿ ಸಾಕಷ್ಟು ವಿಷಯಗಳಿಗೆ ಮನಸ್ಸು ಚಂಚಲವಾಗುತ್ತದೆ. ಆದರೆ ವಿದ್ಯಾರ್ಥಿಗಳು ಒಳ್ಳೆಯ ದಾರಿಯಲ್ಲಿ ನಡೆದು ತಮ್ಮ ತಂದೆ-ತಾಯಿಯ ಕನಸನ್ನು ನನಸು ಮಾಡಿ ಸಮಾಜದಲ್ಲಿ ಸತ್ಪ್ರಜೆಗಳಾಗಿ ಬದುಕಬೇಕು. ಆಗ ಮಾತ್ರ ಸಮಾಜ ನಮ್ಮನ್ನು ಗೌರವಿಸುತ್ತದೆ ಎಂದರು.

ಬಿಜಿಎಸ್ ಸಿಇಟಿ ಪ್ರಾಂಶುಪಾಲ ಡಾ. ರವಿ ಕುಮಾರ್ ಮಾತನಾಡಿ, ಭೈರವೈಕ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ಮಹತ್ವಕಾಂಕ್ಷೆಯೊಂದಿಗೆ 40 ವಿದ್ಯಾರ್ಥಿಗಳೊಂದಿಗೆ ಆರಂಭಿಸಿದ ಬಿಜಿಎಸ್ ಸಮೂಹ ಶಿಕ್ಷಣ ಸಂಸ್ಥೆಗಳು ಇಂದು 500ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಯಾಗಿ ಹೆಮ್ಮರವಾಗಿ ಬೆಳೆದು ನಿಂತಿದೆ. ರಾಜ್ಯದಲ್ಲಿ ಮಾತ್ರವಲ್ಲದೇ ದೇಶದ ವಿವಿಧ ರಾಜ್ಯಗಳಲ್ಲೂ ಬಿಜಿಎಸ್ ಶಿಕ್ಷಣ ಸಂಸ್ಥೆಗಳು ಸಮಾಜದಲ್ಲಿ ಶಿಕ್ಷಣ ಬಿತ್ತುವ ಕೆಲಸ ಮಾಡುತ್ತಿದೆ ಎಂದರು.

ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಮುಂದೆ ಗುರಿ ಹಿಂದೆ ಗುರುವಿದ್ದಾಗ ಮಾತ್ರ ನಮ್ಮ ಬದುಕು ಸರಿ ದಾರಿಯಲ್ಲಿ ನಡೆಯುತ್ತದೆ. ಗುರು ಹಿರಿಯರಿಗೆ ಗೌರವದಿಂದ ನಡೆಯುವ ಗುಣವನ್ನು ಬಾಲ್ಯದಿಂದಲೇ ಬೆಳೆಸಿಕೊಳ್ಳಬೇಕು. ಆಗಮಾತ್ರ ಯುವ ಪೀಳಿಗೆಯು ಸರಿ ದಾರಿಯಲ್ಲಿ ನಡೆಯಲಿದೆ ಎಂದರು.

ಒಕ್ಕಲಿಗರ ಸಂಘದ ಸದಸ್ಯ ರಘುಗೌಡ, ಬಿಜಿಎಸ್ ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜು ಪ್ರಾಂಶುಪಾಲ ಮೋಹನ್, ಮಠದ ವ್ಯವಸ್ಥಾಪಕ ಹೆಚ್. ಕೆ. ಚಂದ್ರಶೇಖರ್ ಮತ್ತಿತರರಿದ್ದರು.

# ರಾಜ್ಯ ಸರ್ಕಾರದ ಯೋಜನೆ ಎಲ್ಲರಿಗೂ ತಲುಪಲಿ



ಬೇಲೂರು: ರಾಜ್ಯ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳನ್ನು ಎಲ್ಲರಿಗೂ ತಲುಪಿಸಲು ಕಾಂಗ್ರೆಸ್ ಕಾರ್ಯಕರ್ತರು ಮುಂದಾಗಬೇಕು ಎಂದು ಮಾಜಿ ಸಚಿವ ಬಿ. ಶಿವರಾಂ ಹೇಳಿದರು. ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ವತಿಯಿಂದ ಆಯೋಜಿಸಲಾಗಿದ್ದ ಆ. 5 ರಂದು ನಡೆಯಲಿರುವ ಬೆಂಗಳೂರು ಪ್ರತಿಭಟನೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ ಪಕ್ಷದ ಪರ ಕಾರ್ಯಕರ್ತರ ಜವಾಬ್ದಾರಿ ಬೂತ್ ಮಟ್ಟದಲ್ಲಿಯೇ ನಿರ್ಧಾರವಾಗುತ್ತದೆ. ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಸೋಲಿನ ಅನುಭವದಿಂದ ನಾವು ಕಲಿಯಬೇಕು. ಹಣ, ವಸ್ತು ಹಂಚಿಕೆ ಮಾಡುತ್ತಿರುವ ವಿರೋಧ ಪಕ್ಷಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಲ್ಲಿ ನಮ್ಮ ಕಾರ್ಯಕರ್ತರು ವಿಫಲರಾಗಬಾರದು. ಸೇವಾ ಮನೋಭಾವದಿಂದ ಕಾರ್ಯಕರ್ತರು ಜನರ ಸಮಸ್ಯೆಗಳಿಗೆ ಸ್ಪಂದಿಸಿದರೆ ಅದು ಮತಗಳಲ್ಲಿ ಪರಿವರ್ತನೆಯಾಗುತ್ತದೆ. ಸಂಘಟನೆಯ ನಿಜವಾದ ಶಕ್ತಿ ದುಡ್ಡಿನಲ್ಲಿ ಅಲ್ಲ, ದುಡಿಮೆಯಲ್ಲಿ ಇದೆ. ನವೆಂಬರ್‌ನಲ್ಲಿ ನಡೆಯಲಿರುವ ಗ್ರಾಮ ಪಂಚಾಯಿತಿ ಚುನಾವಣೆಗೆ ತಯಾರಿ ತಕ್ಷಣದಿಂದ ಆರಂಭವಾಗಬೇಕು ಎಂದು ಅವರು ಒತ್ತಾಯಿಸಿದರು.

ಎಐಸಿಐಸಿ ಪ್ರಧಾನ ಕಾರ್ಯದರ್ಶಿ ಡಾ. ವಿಜಯ್ ಕುಮಾರ್ ಮಾತನಾಡಿ, ಆರ್‌ಎಸ್‌ಎಸ್ ಸಂಘಟನೆ ವರ್ಷದಾದ್ಯಂತ ಕಾರ್ಯನಿರ್ವಹಿಸುತ್ತೆ. ಆದರೆ ಕಾಂಗ್ರೆಸ್ ಮಾತ್ರ ಚುನಾವಣಾ ಸಮಯದಲ್ಲಿ ಮಾತ್ರ ಸಕ್ರಿಯವಾಗುತ್ತದೆ. ಇದರಿಂದ ಫಲಕಂಡಿತವಾಗುತ್ತಿಲ್ಲ. ಬೂತ್ ಮಟ್ಟದಲ್ಲಿ ಸಂಘಟನೆ ಮತ್ತು ಕಾರ್ಯಕರ್ತರ ಚಟುವಟಿಕೆ ಅತ್ಯಗತ್ಯ ಎಂದರು.

ಬೇಲೂರು ಹಳೇಬೀಡು ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸೈಯದ್ ತೌಫಿಕ್, ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷ ಎಂ.ಜೆ. ನಿಶಾಂತ್, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಎಂ.ಆರ್. ವೆಂಕಟೇಶ್, ಪುರಸಭೆ ಅಧ್ಯಕ್ಷೆ ಉಷಾ, ಸದಸ್ಯರಾದ ಭರತ್, ಅಶೋಕ್ ನಾಯಕ್, ಅಕ್ರಂ ಷರೀಫ್, ಮೀನಾಕ್ಷಿ, ಬಿ.ಎನ್. ಚಂದ್ರಶೇಖರ್, ಆನಂದ್, ಬಿಕ್ಕೋಡು ಚೇತನ್, ಮಲ್ಲೇಶ್, ಶ್ರೀನಿವಾಸ್ ಮುಂತಾದವರು ಉಪಸ್ಥಿತರಿದ್ದರು.

# ಮಲ್ಲಿಪಟ್ಟಣ ಸರ್ಕಾರಿ ಕಾಲೇಜು ಕೊಠಡಿ ಉದ್ಘಾಟನೆ



ಅರಕಲಗೂಡು: ತಾಲ್ಲೂಕಿನ ಮಲ್ಲಿಪಟ್ಟಣ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಅಗತ್ಯ ಮೂಲ ಸೌಕರ್ಯ ಸೇರಿ ನುರಿತ ಉಪನ್ಯಾಸಕರ ತಂಡವಿದೆ. ಪೋಷಕರು ತಮ್ಮ ಮಕ್ಕಳನ್ನು ದಾಖಲಿಸುವ ಮೂಲಕ ಪ್ರಯೋಜನ ಪಡೆದುಕೊಳ್ಳಬೇಕೆಂದು ಶಾಸಕ ಎ. ಮಂಜು ತಿಳಿಸಿದರು.

ನೂತನವಾಗಿ ವಿವೇಕ ಯೋಜನೆಯಡಿ 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಕಾಲೇಜು ಕೊಠಡಿಯನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದ ಅವರು, ಮಲ್ಲಿಪಟ್ಟಣ ಹೋಬಳಿ ಅರೆಮಲೆನಾಡು, ಮಲೆನಾಡಿನಿಂದ ಕೂಡಿದೆ. ಹೋಬಳಿ ಕೇಂದ್ರಕ್ಕೆ ಹೊಂದಿಕೊಂಡಂತೆ ಹತ್ತಾರು ಗ್ರಾಮಗಳು ಇವೆ. ತುಂಬಾ ಸಮೀಪದಲ್ಲಿ ಸರ್ಕಾರಿ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಕಾರ್ಯನಿರ್ವಹಿಸುತ್ತಿವೆ. ಖಾಸಗಿ ವ್ಯಾಮೋಹಕ್ಕೆ ಒಳಗಾಗಿ ಮಕ್ಕಳನ್ನು ಹೆಚ್ಚಿನ ಹಣತೆತ್ತು ದೂರದ ಖಾಸಗಿ ಕಾಲೇಜು, ಹೈಸ್ಕೂಲ್‌ಗೆ ದಾಖಲಿಸುವ ಬದಲು ಇಲ್ಲಿನ ಶಾಲಾ ಕಾಲೇಜು ಸೌಕರ್ಯಗಳನ್ನು ಉಚಿತವಾಗಿ ಪಡೆದುಕೊಳ್ಳುವ ನಿಟ್ಟಿನಲ್ಲಿ ಮುಂದಾಗಬೇಕೆಂದು ಕರೆ ನೀಡಿದರು.

ಪಕ್ಕದಲ್ಲಿನ ಸರ್ಕಾರಿ ಪ್ರೌಢಶಾಲಾ ಕೊಠಡಿಗಳಿಗೆ ನಿರ್ಮಿಸಲಾಗಿದ್ದ ಕಬ್ಬಿಣದ ಛಾವಣಿ ಹಾರಿಹೋಗಿದೆ. ಕೊಠಡಿ ಮಳೆಯಿಂದ ಸೋರುತ್ತಿರುವುದನ್ನು ತಪ್ಪಿಸುವ ಸಲುವಾಗಿ ನಿರ್ಮಿಸಲಾಗಿತ್ತು. ಕೂಡಲೇ ದುರಸ್ತಿ ಕಾರ್ಯವನ್ನು ಕೈಗೊಳ್ಳುವಂತೆ ಸ್ಥಳೀಯ ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಸಿಡಿಸಿ ಉಪಾಧ್ಯಕ್ಷ ಡಾ.ವಿಶ್ವನಾಥ್ ಮಾತನಾಡಿ, ನೂತನವಾಗಿ ನಿರ್ಮಿಸಿರುವ ಕೊಠಡಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿಲ್ಲ. ಈ ಸೌಕರ್ಯವನ್ನು ಅತೀ ತುರ್ತಾಗಿ ಮಾಡಿಕೊಡಬೇಕೆಂದು ಶಾಸಕರಲ್ಲಿ ಮನವಿ ಮಾಡಿದರು.

ಕಾಲೇಜಿನ ಪ್ರಾಂಶುಪಾಲರಾದ ಚಂದ್ರಕಲಾ ಮಾತನಾಡಿ, ಕಾಲೇಜಿಗೆ ಅಗತ್ಯವಿರುವ ಕೊಠಡಿಯನ್ನು ನಿರ್ಮಿಸಿಕೊಡಲಾಗಿದೆ. ರಕ್ಷಣೆ ಸಲುವಾಗಿ ಕಾಂಪೌಡ್ ಮಾಡಿಕೊಡಬೇಕು. ಇದೇ ಮೊದಲ ಬಾರಿಗೆ ತಾಲ್ಲೂಕು ಮಟ್ಟದ ಕಾಲೇಜು ಕ್ರೀಡಾಕೂಟವನ್ನು ಆಯೋಜನೆ ಮಾಡುವ ಜವಾಬ್ದಾರಿಯನ್ನು ನಮ್ಮ ಕಾಲೇಜಿಗೆ ನೀಡಲಾಗಿದೆ. ಶಾಸಕರು ಸೇರಿದಂತೆ ಊರಿನ ಮುಖಂಡರು, ದಾನಿಗಳು ಆರ್ಥಿಕ ನೆರವು ನೀಡಿ ಯಶಸ್ವಿಗೊಳಿಸಿಕೊಡಬೇಕೆಂದು ವಿನಂತಿ ಮಾಡಿದರು.

ವೇದಿಕೆಯಲ್ಲಿ ಮಲ್ಲಿಪಟ್ಟಣ ಗ್ರಾಪಂ ಅಧ್ಯಕ್ಷ ಪ್ರಕಾಶ್, ಜಿಪಂ ಎಇಇ ರಮೇಶ್, ಪಿಡಿಒ ಅರುಣ್‌ಕುಮಾರ್, ಮುಖ್ಯ ಶಿಕ್ಷಕಿ ಮಮತ, ಇಸಿಒ ಪ್ರಕಾಶ್, ಸಿಡಿಸಿ ಸದಸ್ಯರಾದ ಮೀನಾಸಿದ್ದಯ್ಯ, ವಿಮಲಾಕ್ಷಿ ಬಸವರಾಜು, ಚಲುವೇಗೌಡ, ಸದಾನಂದ, ಪೊನ್ನಣ್ಣ ಮತ್ತಿತರರಿದ್ದರು.

# ಮಕ್ಕಳ ಕಲಿಕಾ ಸಾಮರ್ಥ್ಯ ವೃದ್ಧಿಗೆ ಆದ್ಯತೆ ನೀಡಿ: ಡಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಕಲಿಕೆಯ ಸಾಮರ್ಥ್ಯ ವೃದ್ಧಿಗೆ ಒತ್ತು ನೀಡಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದರು.

ನಗರದ ಬಾಲಕಿಯರ ಸರ್ಕಾರಿ ವಿಭಜಿತ ಪ್ರೌಢಶಾಲೆಯಲ್ಲಿ ಪ್ರೈಡೇ ಫ್ರೆಂಡ್ ಕಾರ್ಯಕ್ರಮದಡಿ ಜಿಲ್ಲೆಯ ಎಲ್ಲಾ ಪ್ರೌಢಶಾಲೆಯ ಮಕ್ಕಳೊಂದಿಗೆ ವಿಡಿಯೋ ಸಂವಾದದ ಮೂಲಕ ಮಾತನಾಡಿದ ಅವರು, ಪ್ರತಿಯೊಂದು ಮಗುವಿಗೂ ಪ್ರಾಥಮಿಕ ಶಿಕ್ಷಣ ಕಡ್ಡಾಯ, ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಶಿಕ್ಷಣ ಅತ್ಯಗತ್ಯ ಎಂದರು.

ಮಕ್ಕಳ ಸುರಕ್ಷತೆ ಬಹುಮುಖ್ಯ ಎಂದ ಅವರು ಬಾಲ್ಯವಿವಾಹ, ಬಾಲ ಗರ್ಭಿಣಿ, ಪೋಕ್ಸೋ ಕಾಯ್ದೆ ಬಗ್ಗೆ ತಿಳಿವಳಿಕೆ ಇರಬೇಕು. ಶಿಸ್ತು ಮತ್ತು ಶ್ರದ್ಧೆಯಿಂದ ಕಲಿಯುವುದನ್ನು ಅಳವಡಿಸಿಕೊಳ್ಳಬೇಕು. 18 ವರ್ಷದೊಳಗಿನ ಪ್ರತಿಯೊಂದು ಮಕ್ಕಳು ಮೊಬೈಲ್ ಬಳಕೆ ಮಾಡದಂತೆ ತಿಳಿಸಿದರಲ್ಲದೆ, ಸಾಮಾಜಿಕ ಜಾಲತಾಣಗಳ ಬಳಕೆಯಿಂದ ದೂರವಿರುವಂತೆ ತಿಳಿಸಿದರು.

ಶಿಕ್ಷಕರು ಸಹ ಶಾಲಾ ಅವಧಿಯಲ್ಲಿ ಮೊಬೈಲ್ ಬಳಕೆ ಮಾಡಬಾರದು.

ಶಿಸ್ತುಬದ್ಧ ಜೀವನಕ್ಕೆ ಮೊದಲ ಆದ್ಯತೆ ನೀಡಬೇಕು. ಕಠಿಣ ಪರಿಶ್ರಮ ಮತ್ತು ಶಿಸ್ತಿನಿಂದ ಅತ್ಯುತ್ತಮ ವ್ಯಕ್ತಿಯಾಗಬಹುದು. ದೇಶವನ್ನು ಅರಿತುಕೊಳ್ಳಲು ಮತ್ತು ಸರಿಯಾದ ರೀತಿಯಲ್ಲಿ ಜೀವನ ನಡೆಸಲು ಶಿಕ್ಷಣ ಅಗತ್ಯವಿದೆ ಎಂದು ತಿಳಿಸಿದರು.

ಕಳೆದ ಬಾರಿ ಹಾಸನ ಜಿಲ್ಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ರಾಜ್ಯಕ್ಕೆ 6ನೇ ಸ್ಥಾನ ಪಡೆದಿದೆ. ಈ ಬಾರಿ ಇನ್ನೂ ಉತ್ತಮ ಸ್ಥಾನ ಪಡೆಯಲು ಎಲ್ಲರೂ ಪ್ರಯತ್ನಿಸಬೇಕು. ಓದಿದ್ದನ್ನು ನೆನಪಿಟ್ಟುಕೊಳ್ಳಲು ಪುನರ್ ಮನನ ಮಾಡುವುದನ್ನು ಅಭ್ಯಾಸ ಮಾಡಿಕೊಳ್ಳಿ ಎಂದು ತಿಳಿಸಿದರು.

ಅಶಿಸ್ತು, ನಿದ್ದೆ, ಮನೋರಂಜನೆ, ಮದುವೆ ಸಮಾರಂಭ, ಸಿನಿಮಾ ಸಂತೋಷ ಕೂಟಗಳಲ್ಲಿ ಭಾಗಿಯುವುದನ್ನು ತ್ಯಜಿಸಬೇಕು. ಓದಿಗಷ್ಟೆ ಒತ್ತು ನೀಡಿ ಗುರಿ ಸಾಧಿಸಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ ಎಂದು ತಿಳಿಸಿದರು. ಮಕ್ಕಳು ನೆನಪಿಟ್ಟುಕೊಳ್ಳಲು ಹೇಗೆ ಓದಬೇಕು ಎಂಬುವುದರ ಬಗ್ಗೆ ಮಾರ್ಗದರ್ಶನ ನೀಡುವುದರ ಜೊತೆಗೆ ಮುಂದೆ ಯಾವ ವಿಷಯ ಆಯ್ಕೆ ಮಾಡಿಕೊಂಡು ವಿದ್ಯಾಭ್ಯಾಸ ನಡೆಸಿ ಯಾವ ವೃತ್ತಿಯಲ್ಲಿ ತೊಡಗಿಸಿಕೊಳ್ಳಬಹುದು ಎಂಬುದರ ಬಗ್ಗೆಯೂ ಪ್ರೌಢ ಶಾಲೆಯ ಹಂತದಲ್ಲಿಯೇ ಮಕ್ಕಳಿಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

# ದೊಡ್ಡಮಗ್ಗೆಯಲ್ಲಿ ಮಕ್ಕಳ ಮನೆಗೆ ಬಿಇಒ ಭೇಟಿ : ವ್ಯಾಸಂಗ ಪರಿಶೀಲನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ತಾಲ್ಲೂಕಿನಲ್ಲಿ ಮಕ್ಕಳ ಕಲಿಕೆಯನ್ನು ಗಟ್ಟಿಗೊಳಿಸುವ ಸಲುವಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ನಾರಾಯಣ ಮತ್ತು ಶಿಕ್ಷಕರ ತಂಡ ಮೊದಲ ಹೆಜ್ಜೆಯಾಗಿ ದೊಡ್ಡಮಗ್ಗೆ ಗ್ರಾಮದಲ್ಲಿ ರಾತ್ರಿ ಮಕ್ಕಳ ಮನೆ ಭೇಟಿ ಕಾರ್ಯವನ್ನು ಕೈಗೊಂಡಿತು.

ಈಗಾಗಲೇ ಎಸ್ಸೆಸ್ಸೆಲ್ಸಿ ಮತ್ತು 7ನೇ ತರಗತಿ ವಿದ್ಯಾರ್ಥಿಗಳ ಎಫ್‌ಎ1 ಫಲಿತಾಂಶ ಅರಿತಿರುವ ಬಿಇಒ ಅವರು, ಯಾವ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿವೆ ಮತ್ತು ಟಾಪ್ 10ನಲ್ಲಿ ಸಾಧನೆ ಮಾಡಿರುವ ಮಕ್ಕಳ ಮನೆಗೆ ಭೇಟಿ ನೀಡಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಮತ್ತು ಕಲಿಕೆಯಲ್ಲಿ ಹಿಂದಿರುವ ಕುರಿತು, ಶಿಕ್ಷಕರ ಸಮ್ಮುಖದಲ್ಲಿ ಮಕ್ಕಳ ಪೋಷಕರೊಂದಿಗೆ ಸಮಾಲೋಚನೆ ನಡೆಸಿದರು.

ಕಳೆದ ಬಾರಿ ಎಸ್ಸೆಸ್ಸೆಲ್ಸಿ ಓದುತ್ತಿದ್ದ ಮಕ್ಕಳ ಮನೆ ಭೇಟಿ, ಸಮಾಲೋಚನೆ ಮತ್ತು ಕಲಿಕಾ ವಿಧಾನದಲ್ಲಿ ಬದಲಾವಣೆ ತಂದ ಪರಿಣಾಮ ಜಿಲ್ಲೆಯಲ್ಲಿ ಕೊನೆ ಸ್ಥಾನದಲ್ಲಿದ್ದ ಎಸ್ಸೆಸ್ಸೆಲ್ಸಿ ಫಲಿತಾಂಶವನ್ನು ನಾಲ್ಕನೇ ಸ್ಥಾನಕ್ಕೆ ತರುವಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಯಶಸ್ವಿ ಕಂಡುಕೊಂಡ ಹಿನ್ನೆಲೆ, ಈ ಬಾರಿ ಆರಂಭದಲ್ಲಿಯೇ ಮಕ್ಕಳ ಮನೆ ಭೇಟಿ ಕೈಗೊಂಡರೇ ಈ ಸಾಲಿನ ಫಲಿತಾಂಶದಲ್ಲಿ ಮೊದಲ ಮೂರನೇ ಸ್ಥಾನವನ್ನು ಪಡೆದುಕೊಳ್ಳಬಹುದಾಗಿದೆ ಎಂಬ ಮುನ್ನೆಚ್ಚರಿಕೆಯಿಂದ ಮಕ್ಕಳ ಮನೆ ಭೇಟಿ ಮಹತ್ವ ಪಡೆದುಕೊಂಡಿದೆ.

ವಿಶೇಷವಾಗಿ ಈ ಬಾರಿ 7ನೇ ತರಗತಿ ಓದುತ್ತಿರುವ ಮಕ್ಕಳ ಕಲಿಕೆಯ ಮೇಲೆ ಹೆಚ್ಚಿನ ನಿಗಾವಹಿಸಲಾಗಿದೆ. ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಬದಲಾವಣೆ ತಂದರೇ ಅದು ಪ್ರೌಢಶಾಲಾ ಶಿಕ್ಷಣದ ಫಲಿತಾಂಶಲ್ಲಿ ಫಲ ನೀಡಲಿದೆ ಎಂಬ ಸದುದ್ದೇಶದಿಂದ ಎಫ್‌ಎ1 ಫಲಿತಾಂಶವನ್ನು ಮನಗಂಡು ಈ ಮನೆ ಭೇಟಿ ಆರಂಭಿಸಲಾಗಿದೆ ಎಂದರು.

# ವರದಕ್ಷಿಣೆ ತರಲಿಲ್ಲವೆಂದು ಪತ್ನಿ ಮೇಲೆ ಹಲ್ಲೆ: ಆರೋಪ

ಸಕಲೇಶಪುರ: ಆಷಾಡ ಮುಗಿಸಿ ಮನೆಗೆ ಬಂದ ಪತ್ನಿ ತವರಿನಿಂದ ವರದಕ್ಷಿಣೆ ತಂದಿಲ್ಲವೆಂದು ಪತಿ ಹಲ್ಲೆ ನಡೆಸಿದ್ದಾನೆಂಬ ಆರೋಪ ಕೇಳಿಬಂದಿದ್ದು ಗಾಯಾಳು ಮಹಿಳೆ ಆಸ್ಪತ್ರೆಗೆ ದಾಖಲಾಗಿದ್ದಾರೆ.

ತಾಲ್ಲೂಕಿನ ಹೊಸೂರು ಗ್ರಾಮದ ಸುಷ್ಮಿತಾ ಗಾಯಾಳು. ಗ್ರಾಮದ ಶ್ರೀಮಂತ್ ಹಾಗೂ ಶುಕ್ರವಾರ ಸಂತೆ ಸಮೀಪದ ಶೆಟ್ಟಿಹಳ್ಳಿ ಗ್ರಾಮದ ಸುಷ್ಮಿತಾ ಅವರ ಮದುವೆ ಆರು ತಿಂಗಳ ಹಿಂದೆ ನಡೆದಿದೆ. ಸುಷ್ಮಿತಾ ಅವರ ತವರು ಮನೆಯವರೇ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮದುವೆ ಮಾಡಿಕೊಟ್ಟಿದ್ದಾರಾದರೂ ವರದಕ್ಷಿಣೆ ತರುವಂತೆ ಶ್ರೀಮಂತ್ ನಿತ್ಯ ಪೀಡಿಸುತ್ತಿದ್ದ. ಜಮೀನು ಕೆಲಸ ಮಾಡಿಕೊಂಡಿರುವ ಯುವಕ ಜೆಸಿಬಿ ಖರೀದಿಸಿ 5 ಲಕ್ಷ ರೂ. ಸಾಲ ಮಾಡಿಕೊಂಡಿದ್ದೇನೆ.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-03

1492: ಕ್ರಿಸ್ಟೋಫರ್ ಕೊಲಂಬಸ್ ಸ್ಪೇನ್‌ನ ಪಲೋಸ್‌ನಿಂದ ಹೊಸ ಜಗತ್ತನ್ನು (ಅಮೆರಿಕ) ಅನ್ವೇಷಿಸಲು ಮೊದಲ ಸಮುದ್ರಯಾನ ಆರಂಭಿಸಿದರು.

1914: ಪ್ರಥಮ ವಿಶ್ವಯುದ್ಧ, ಜರ್ಮನಿ ಫ್ರಾನ್ಸ್‌ಗೆ ಯುದ್ಧ ಘೋಷಣೆ ಮಾಡಿತು.

1949: ಭಾರತದಲ್ಲಿ ಭಾರತೀಯ ಸಂಸತ್ತಿನ ತಳಮಟ್ಟದ ಶ್ರೇಷ್ಠ ಗೌರವ ಪದವಿಯಾದ ರಾಜ್ಯಸಭೆಯ ನಾಮಕರಣಕ್ಕೆ ಮಂಜೂರಾತಿ ದೊರಕಿತು.

1960: ನೈಜರ್ ಫ್ರಾನ್ಸ್‌ನಿಂದ ಸ್ವಾತಂತ್ರ್ಯ ಪಡೆಯಿತು.

### ಜನನ

1926: ಟೋನಿ ಬೆನ್ನೆಟ್, ಪ್ರಸಿದ್ಧ ಅಮೆರಿಕನ್ ಗಾಯಕ.

1958: ಸುನೀಲ್ ಗವಾಸ್ಕರ್ ಅವರ ಪುತ್ರ, ರೋಹನ್ ಗವಾಸ್ಕರ್, ಭಾರತೀಯ ಕ್ರಿಕೆಟ್ ಆಟಗಾರ.

1977: ಟಾಮ್ ಬ್ರ್ಯಾಡಿ, ಪ್ರಸಿದ್ಧ ಅಮೆರಿಕನ್ ಫುಟ್ಬಾಲ್ ಆಟಗಾರ.


### ಮರಣ

2004: ಹನುಮಂತಯ್ಯ, ಪ್ರಸಿದ್ಧ ಕನ್ನಡ ನಾಟಕಕಾರ, ನಟ ಹಾಗೂ ನಿರ್ದೇಶಕ.

# ಆರೋಗ್ಯಕ್ಕಾಗಿ ಉಪವಾಸ



- ಚೇತನ್ ಗುರೂಜಿ, ಬಸವ ಯೋಗ ಕೇಂದ್ರ, ಅಡಗೂರು



ಹಿಂದೆ ಸ್ವಾತಂತ್ರ್ಯಕ್ಕೋಸ್ಕರ ಉಪವಾಸ ಮಾಡಿದ್ದನ್ನು ಇತಿಹಾಸದಲ್ಲಿ ಓದಿದ್ದೇವೆ. ಅಣ್ಣಾ ಹಜಾರೆಯವರು ಉಪವಾಸ ಮಾಡಿರುವುದು ನೋಡಿದ್ದೇವೆ. ಹಲವು ಬೇಡಿಕೆಗಳ ಈಡೇರಿಕೆಗಾಗಿ ರೈತರು, ಕಾರ್ಮಿಕರು, ಅನೇಕ ಸಂಘ ಸಂಸ್ಥೆಗಳು ಉಪವಾಸ ಸತ್ಯಾಗ್ರಹ ಮಾಡುತ್ತಿರುತ್ತಾರೆ. ಇನ್ನು ಆಡಳಿತ ಪಕ್ಷದ ವಿರುದ್ಧ ವಿರೋಧ ಪಕ್ಷದವರು ಉಪವಾಸ ಕೂರುವುದನ್ನು ಆಗಾಗ ನೋಡುತ್ತಿರುತ್ತೇವೆ. ಆದರೆ ಆರೋಗ್ಯಕ್ಕಾಗಿ ಉಪವಾಸ ಮಾಡುವುದುಂಟ! ಹೌದು. ಈಗಲೂ ನಮ್ಮ ಹಿರಿಯರು ಹಬ್ಬಗಳ ನೆಪದಲ್ಲಿ ದೇವರಿಗಾಗಿ ಉಪವಾಸ ಮಾಡುತ್ತಾರೆ. ಬುದ್ಧಿವಂತರೆನಿಸಿಕೊಂಡ ನಾವುಗಳು ಬದುಕಿರುವುದೇ ತಿನ್ನಲಿಕ್ಕೆ ಅಂತಹದರಲ್ಲಿ ಊಟ ಬಿಟ್ಟು ಇರುವುದೇ? ಖಂಡಿತ ಸಾಧ್ಯವಿಲ್ಲವೆಂದು ಇದ್ದುಬಿಡುತ್ತಿದ್ದಾರೆ. ಹಿರಿಯರು ಆರೋಗ್ಯ ಚೆನ್ನಾಗಿಟ್ಟುಕೊಳ್ಳಲು ಎಂದರೆ ಅರಿತೋ ಅರಿಯದೆಯೋ ಏಕಾದಶಿ, ಸಂಕಷ್ಟಿ, ಹುಣ್ಣಿಮೆ, ಅಮಾವಾಸ್ಯೆ ಅಲ್ಲದೆ ವಾರದಲ್ಲಿ ಒಂದು ದಿನ ದೇವರಿಗಾಗಿ ಉಪವಾಸ ಮಾಡುತ್ತಾ ಬರುತ್ತಿದ್ದರು. ಅದನ್ನೇ ನಮಗೂ ಸಹ ತಿಳಿಸುತ್ತಾ ಇರುವರು. ನಾವುಗಳು ಕೇಳುವ ಸ್ಥಿತಿಯಲ್ಲಿ ಇಲ್ಲ. ಕಾರಣ ಊಟ ಬಿಡುವುದೆಂದರೆ ಅದೊಂದು ಕೆಲಸ ಹೇಳಬೇಡಿ. ಏಕೆಂದರೆ ಉಪವಾಸದ ಬಗ್ಗೆ ಇರುವ ತಪ್ಪು ತಿಳಿವಳಿಕೆ ಊಟ ಬಿಟ್ಟರೆ ನಿಶಕ್ತಿ, ತಲೆಸುತ್ತು, ನಿದ್ದೆ ಸರಿಯಾಗಿ ಬರುವುದಿಲ್ಲ ಎಂಬ ಕಲ್ಪನೆ ಮೂಡಿರುವುದರಿಂದ ಅಲ್ಲದೆ ಏನು ತಿನ್ನದೆ ಇದ್ದರೆ ಇನ್ನೇನೋ ಆಗುತ್ತದೆ ಎಂಬ ಭಯ ಬೇರೂರಿದೆ. ಅದೇ ಮಕ್ಕಳಾಗಿದ್ದಾಗ ಎಷ್ಟೋ ಸಾರಿ ಅನಾರೋಗ್ಯದ ಏರುಪೇರು ಆದಾಗ ಮನೆಯವರು ಒತ್ತಾಯಿಸಿದರು. ಏನನ್ನು ತಿನ್ನದೇ ಹಾಗೆ ಇರುತ್ತಿದ್ದೆವು. ಬುದ್ಧಿ ಬೆಳೆದಂತೆಲ್ಲ (ವಯಸ್ಸಾದಂತೆಲ್ಲ) ನಾವುಗಳೇ ಎಂತಹ ಅನಾರೋಗ್ಯದ ಸಮಸ್ಯೆ ಆದರೂ ತಿನ್ನುವುದನ್ನು ಮಾತ್ರ ನಿಲ್ಲಿಸುವುದಿಲ್ಲ. ಏಕೆಂದರೆ ಇವಾಗ ಜಾಣರಾಗಿದ್ದೇವಲ್ಲವೇ.

ಈಗಂತು ನಮ್ಮ ನಾಗರಿಕ ಸಮಾಜ ಆರೋಗ್ಯಕ್ಕಾಗಿ ಉಪವಾಸ ಮಾಡುವುದನ್ನು ರೂಢಿಸಿಕೊಂಡರೆ ಮಾತ್ರವೇ ಇನ್ನೂ ಹೆಚ್ಚು ಸದೃಢರಾಗಿ ನಿರೋಗಿಗಳಾಗಿ ಇರುವುದಕ್ಕೋಸ್ಕರನಾದರೂ ಸಹ ಮಾಡಲೇಬೇಕು .

ಉಪವಾಸವೆಂದರೇನು ಎಂಬುದರ ಅರ್ಥ ಸಂಸ್ಕೃತದಲ್ಲಿ ಉಪ ಎಂದರೆ ಸಮೀಪ, ವಾಸ ಎಂದರೆ ಇರುವುದು ಎಂದರ್ಥ. ಯಾರ ಹತ್ತಿರ ಇರುವುದು ಅಡುಗೆ ಮನೆಯ ಸಮೀಪವೇ, ಅಲ್ಲ. ಆತ್ಮ ಪರಮಾತ್ಮನಡೆಗೆ ಧ್ಯಾನಿಸಲು ಅನುಕೂಲ ಮಾಡುತ್ತದೆ. ಆ ವಿಚಾರ ಹಾಗಿರಲಿ ಉಪವಾಸದಿಂದ ಏನು ಉಪಯೋಗವಿದೆ ಮೊದಲು ತಿಳಿಸಿ. ಆ ಮೇಲೆ ನೋಡೋಣ. ಇಂದಿನವರು ಕೇಳುವಂತಹ ಪ್ರಶ್ನೆ. ಉಪವಾಸದಿಂದ ಆಗುವ ಆರೋಗ್ಯದ ಲಾಭಗಳೇನು ತಿಳಿಸಿ. ಖಂಡಿತ ತಿಳಿಸುವ ಮೊದಲು ಒಂದು ಉದಾಹರಣೆ ಹೇಳುತ್ತೇನೆ. ಆಗ ಅರ್ಥವಾಗುತ್ತದೆ. ನಾವು ಬಳಸುವ ವಾಹನವನ್ನು ಐದು ಅಥವಾ ಹತ್ತು ಸಾವಿರ ಕಿಲೋ ಮೀಟರ್ ಓಡಿಸಿದ ನಂತರ ಸರ್ವಿಸ್ ಮಾಡಿಸಲು ತೆಗೆದುಕೊಂಡು ಹೋಗುತ್ತೇವೆ. ಕಾರಣ ಇಂಜಿನ್ ಚೆನ್ನಾಗಿ ಇರಬೇಕೆಂದು ಅದೇ ಮನುಷ್ಯ ತನ್ನ ದೇಹದ ಹೊಟ್ಟೆ ಎನ್ನುವ ಇಂಜಿನ್ ಚೆನ್ನಾಗಿಟ್ಟುಕೊಳ್ಳಲು ಅದಕ್ಕೂ ಸರ್ವಿಸ್ ಬೇಡವೇ? ಹೌದು. ಬೇಕು ಹಾಗಾದರೆ ಎಲ್ಲಿ ಮಾಡಿಸುವುದು ಕೇಳುವುದುಂಟು. ಇದನ್ನು ನೀವೇ ಮಾಡಿಕೊಳ್ಳಬೇಕು. ಅಂದರೆ ತಿಂಗಳಲ್ಲಿ ಒಂದೆರಡು ದಿನ ಬರೀ ನೀರನ್ನೆ ಕುಡಿದುಕೊಂಡು ಇರುವುದರಿಂದ ದೇಹದೊಳಗಿನ ಎಲ್ಲಾ ಅಂಗಾಂಗಗಳ ಸರ್ವಿಸ್ ಆದಂತಾಗುತ್ತದೆ. ಅರ್ಥವೆಂದರೆ ಈ ಮೂಲಕ ಹೊಟ್ಟೆಯು ಶುಚಿಯಾಗುತ್ತದೆ. ಬೇಡವಾದ ಎಲ್ಲಾ ಕಲ್ಮಶ ಮಲ ಮೂತ್ರದ ಮೂಲಕ ಹೊರ ಹೋಗುತ್ತದೆ. ಜೊತೆಗೆ ದೊಡ್ಡಕರುಳು, ಸಣ್ಣಕರುಳು, ಜೀರ್ಣಾಂಗ ವ್ಯೂಹ, ಲಿವರ್, ಕಿಡ್ನಿ ಮತ್ತು ಶ್ವಾಸಕೋಶಗಳಿಗೆ ಒತ್ತಡ ಕಡಿಮೆಯಾಗುವುದರಿಂದ ಅವುಗಳು ಹೊಸ ಹುರುಪಿನೊಂದಿಗೆ ಮತ್ತೆ ಕೆಲಸ ಮಾಡುತ್ತವೆ. ಇದರ ಅನುಭವವನ್ನು ಅನುಭವಿಸಬೇಕೆಂದರೆ ಉಪವಾಸ ಮಾಡಿಯೇ ತಿಳಿದುಕೊಳ್ಳಬೇಕು. ಹಾಗಾದರೆ ಎಲ್ಲಾ ವಯಸ್ಸಿನವರು ಮಾಡಬಹುದೇ. ಅಲ್ಲದೆ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಹೃದಯ ಸಂಬಂಧಿ ತೊಂದರೆ ಇರುವವರು ಹಾಗೆ ಇನ್ನೂ ಅನೇಕ ಕಾಯಿಲೆಗಳಿರುವವರು ಮಾಡುವುದಕ್ಕಾಗುತ್ತದ ಎಂಬುದು ನಮ್ಮೆಲ್ಲರ ಪ್ರಶ್ನೆ. ಜೊತೆಗೆ ಊಟ ಬಿಟ್ಟರೆ ಗ್ಯಾಸ್ಟ್ರಿಕ್ ಬರುತ್ತದೆ ಎಂದು ಹೇಳುವ ಡಾಕ್ಟರ್‌ಗಳ ಮಾತಿಗೆ ಮನ್ನಣೆ ಬಂದಿದೆ. ಹಾಗಾದ್ರೆ ಎಲ್ಲಾ ವಯಸ್ಸಿನವರು ಎಂದರೆ ಹತ್ತು ವರ್ಷ ಮೇಲ್ಪಟ್ಟ ಮಕ್ಕಳಿಂದ ಹಿಡಿದು ಎಲ್ಲರೂ ಅವರವರ ಶಕ್ತಿ ಅನುಸಾರ ಅಲ್ಲದೆ ಅನಾರೋಗ್ಯದ ತೊಂದರೆಗಳಿದ್ದರೆ ನಿಸರ್ಗ ಚಿಕಿತ್ಸೆಯ ತಜ್ಞರ ಮಾರ್ಗದರ್ಶನದಲ್ಲಿ ಉಪವಾಸ ಮಾಡುವುದರಿಂದ ಆರೋಗ್ಯವನ್ನು ಸರಿಪಡಿಸಿಕೊಂಡ ಉದಾಹರಣೆಗಳು ಸಾಕಷ್ಟಿವೆ.

ಸ್ವತ: 21 ದಿನಗಳ ಉಪವಾಸವನ್ನು ಸಹ ಮಾಡಿದ್ದೇನೆ. ನಾಲ್ಕು ದಿನ ನೀರನ್ನೆ ಕುಡಿದುಕೊಂಡು ನಂತರ 10 ದಿನ ಜೇನುತುಪ್ಪ, ನಿಂಬೆರಸ, ಎರಡು ದಿನ ಎಳನೀರು, ಎರಡು ದಿನ ಮಜ್ಜಿಗೆ ಅಂತರದಲ್ಲಿ ಮೂರು ದಿನ ರಸ ಭರಿತ ಹಣ್ಣು ಅಲ್ಲದೆ ಎರಡು ದಿನ ಹಸಿ ತರಕಾರಿ ಹೀಗೆ ಮಾಡಿದ್ದೇನೆ. ಅಲ್ಲದೆ ಪ್ರತಿ ತಿಂಗಳು ಆಗಾಗ ಉಪವಾಸವಿರುವ ಅಭ್ಯಾಸ ರೂಢಿಸಿಕೊಂಡಿದ್ದೇನೆ. ಈ ಲೇಖನ ಬರೆಯುವ ದಿನವೂ ಸಹ ನೀರನ್ನು ಕುಡಿದು ಇದ್ದೇನೆ. ಕಾರಣ ಸಾಧ್ಯವಾದಷ್ಟು ಮಟ್ಟಿಗೆ ಮಾಡುವುದನ್ನೇ ಇನ್ನೊಬ್ಬರಿಗೂ ತಿಳಿಸಿದರೆ ಪರಿಣಾಮ ಬೀರುತ್ತದೆ. ಅಲ್ಲದೆ ಆತ್ಮವಿಶ್ವಾಸವು ಸಹ ಜಾಸ್ತಿ ಆಗುತ್ತದೆ. ಹಾಗಾಗಿಯೇ ಯೋಗ ಶಿಬಿರಗಳಲ್ಲಿ ಬರುವ ಅಭ್ಯಾಸಗಳಿಗೆ ಆರೋಗ್ಯದಿಂದಿರಲು ಉಪವಾಸದ ಮಹತ್ವ ತಿಳಿಸುತ್ತಾ ಅನುಸರಿಸುವಂತೆ ಮನವರಿಕೆ ಮಾಡಿದ್ದರ ಫಲ ನೂರಾರು ಜನರು ಔಷಧ ರಹಿತ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ಆರೋಗ್ಯವಾಗಿರಲು ಉಪವಾಸ ನೀನು ಮಾಡಲೇಬೇಕೆಂದು ಒತ್ತಾಯಿಸಿ ಅನುಭವ ಮಾಡಿಸಿಕೊಟ್ಟ ಪೂಜ್ಯ ಬಸವಾನಂದ ಮಹಾಸ್ವಾಮೀಜಿಯವರಿಗೆ ಧನ್ಯವಾದ ಹೇಳಲೇಬೇಕು. ಇಲ್ಲದೆ ಇದ್ದಿದ್ದರೆ ನಿಮ್ಮೆಲ್ಲರ ಜೊತೆಗೆ ಆರೋಗ್ಯದ ಕುರಿತ ಲೇಖನ ಬರೆಯಲು ಹಂಚಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲವೇನೋ.

ಶರಣೆ ಅಕ್ಕಮಹಾದೇವಿಯವರು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ

ಆಹಾರವ ಕಿರಿದು ಮಾಡಿರಣ್ಣಾ
ಆಹಾರವಾಗಿ ಕಿರಿದು ಮಾಡಿ
ಆಹಾರದಿಂದ ವ್ಯಾಧಿ ಹಬ್ಬಿ ಬಲಿಯುವುದಯ್ಯ

ಆಹಾರದಿಂದ ನಿದ್ರೆ, ನಿದ್ರೆಯಿಂದ ತಾಮಸ ಅಜ್ಞಾನ ಮೈಮರೆವು, ಅಜ್ಞಾನದಿಂದ ಕಾಮ ವಿಕಾರ ಹೆಚ್ಚಿ ಕಾಯ ವಿಕಾರ, ಮನೋ ವಿಕಾರ, ಇಂದ್ರಿಯ ವಿಕಾರ, ಭಾವ ವಿಕಾರ, ವಾಯು ವಿಕಾರ ಉಂಟುಮಾಡಿ ಸೃಷ್ಟಿಗೆ ತಹುದಾದ ಕಾರಣ ಕಾಯದ ಆಪೋಷಣೆ ಬೇಡ. ಹೀಗೆ ವಚನದಲ್ಲಿ 800 ವರ್ಷಗಳ ಹಿಂದೆ ತಿಳಿಸಿದ್ದಾರೆಂದರೆ ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಲ್ಲವೇ.

ಅಂದರೆ ಊಟವನ್ನು ಮಾಡುವುದೇ ಬೇಡವೇ ಬರೀ ಉಪವಾಸ ಮಾಡಿಕೊಂಡಿದ್ದರೆ ಎಲ್ಲವೂ ಆಗುತ್ತದೆಯೇ ಎಂಬ ಯೋಚನೆ ಮೂಡುವುದು ಸಹಜ. ಅರ್ಥ ದೇಹಕ್ಕೆ ಹಿತವಾಗುವ ಆಹಾರ ಸೇವಿಸುವುದನ್ನು ಮಾಡಬೇಕು



ಮತ್ತು ಮನೋನಿಗ್ರಹಕ್ಕೆ ಸಹಕಾರಿಯಾಗುವ ಅಭ್ಯಾಸ ರೂಢಿಸಿಕೊಳ್ಳಬೇಕೆಂಬುದು ಮೇಲಿನ ವಚನದ ಸಾರಾಂಶ ಅದಕ್ಕಾಗಿಯೇ ನಮ್ಮ ಋಷಿಮುನಿಗಳು ಸಾಧು ಸಂತರು ಯೋಗಿ ಆಗಾಗ ಉಪವಾಸ ವ್ರತ ಆಚರಿಸುತ್ತಾ ಬರುತ್ತಿರುವುದನ್ನು ಈಗಲೂ ನೋಡುತ್ತೇವೆ. ಕಾರಣ ಇಂದ್ರಿಯ ನಿಗ್ರಹ ಅಲ್ಲದೆ ಮನಸ್ಥಿತಿ ಹಿಡಿದಿಟ್ಟುಕೊಳ್ಳಲು ಅಲ್ಲದೆ ಬಸವಣ್ಣನವರು ಹೇಳಿದಂತೆ ದೇಹವೇ ಎಲ್ಲಾ ಸಾಧನೆಗಳಿಗೆ ಮೂಲವಾಗಿರುವುದರಿಂದ ದೇಗುಲವನ್ನು ಹಿಡಿಸಿಕೊಳ್ಳಬಾರದು. ಸಾಂಸಾರಿಕ ಜೀವನದಲ್ಲಿ ಇರುವ ನಾವುಗಳು ಬೇರೆ ಯಾವುದೇ ಕಾರಣಕ್ಕೂ ಉಪವಾಸವಿರದಿದ್ದರೂ ಪರವಾಗಿಲ್ಲ. ಆರೋಗ್ಯಕ್ಕಾಗಿಯಾದರೂ ಇರುವ ರೂಢಿಯನ್ನು ಈ ಲೇಖನ ಓದಿದ ಮೇಲಾದರೂ ಅಭ್ಯಾಸ ಮಾಡಿಕೊಳ್ಳಿ ಒಳ್ಳೆಯದಾಗುತ್ತದೆ. ಭಯವಿದ್ದರೆ ಅಥವಾ ಹೇಗೆ ಮಾಡಬೇಕು ಎಂಬ ಸಲಹೆ ಬೇಕಿದ್ದರೆ ನಿಮಗೆ ಮಾರ್ಗದರ್ಶನ ಮಾಡಲು ಜೊತೆಗೆ ಇದ್ದೇ ಇರುತ್ತೇನೆ. ಕಾರಣ 23 ವರ್ಷಗಳಿಂದ ನಿರಂತರವಾಗಿ ಆಗಾಗ ಉಪವಾಸ ಮಾಡುತ್ತಾ ಪ್ರತಿದಿನ ಎರಡು ವೇಳೆ ಮಾತ್ರ ಆಹಾರ ಸೇವಿಸುತ್ತಾ ನಿಮ್ಮೆಲ್ಲರ ಆಶೀರ್ವಾದದಿಂದ ಯಾವುದೇ ಕಾಯಿಲೆಗಳು ಬರದಂತೆ ಕಾಪಾಡಿಕೊಂಡು ಅಲ್ಲದೆ ಸಣ್ಣಪುಟ್ಟ ನೋವುಗಳಿಗೂ ಕಾಯಿಲೆಗಳಿಗೂ ಔಷಧಿ ತೆಗೆದುಕೊಳ್ಳದೆ ಬರುತ್ತಿದ್ದೇನೆ. ಇದಕ್ಕೆಲ್ಲ ಕಾರಣ ಉಪವಾಸ ಮತ್ತು ಆಹಾರದ ಮಿತಿ ಇಟ್ಟುಕೊಂಡಿರುವುದರಿಂದ ಕೊನೆಗೆ ಒಂದು ಮಾತು ಎಷ್ಟು ಹೊತ್ತು ತಿನ್ನುತ್ತೇವೆ ಎನ್ನುವುದಕ್ಕಿಂತ ಏನು ತಿನ್ನುತ್ತೇವೆ ಅನ್ನುವುದು ಮುಖ್ಯ. ಎಷ್ಟು ತಿನ್ನುತ್ತೇವೆ ಅನ್ನೋದಕ್ಕಿಂತ ಏನನ್ನು ತಿನ್ನುತ್ತೇವೆ ಅನ್ನುವುದು ಮುಖ್ಯ ಹೌದಲ್ಲವೇ?

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248